# ದುಶ್ಚಟದ ದುರ್ಗಂಧ

■ ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು



ಕಣ್ಣಿಗೆ ಹಸಿರುಜ್ಜುವ ವನಸಿರಿಯ ಮಡಿಲಲ್ಲಿದ್ದ ಗುರುಕುಲದಲ್ಲಿ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ವಿದ್ಯಾರ್ಥಿಗಳ ಬಳಗದಲ್ಲಿ ವಿದ್ಯಾಪತಿ ಎಂಬ ವಿದ್ಯಾರ್ಥಿ ಇದ್ದನು. ಓದುಬರಹಗಳಲ್ಲಿ ವಿದ್ಯಾಪತಿ ಇತರರೆಲ್ಲರಿಗಿಂತ ಮುಂದಿದ್ದುದು ಆತನ ಗರ್ವವನ್ನು ಹೆಚ್ಚಿಸಿತ್ತು.

ಒಂದು ರಾತ್ರಿ ವಿದ್ಯಾರ್ಥಿಗಳೆಲ್ಲಾ ಮಲಗಿರುವಾಗ ನಿಧಾನವಾಗಿ ಬಾಗಿಲು ಅತ್ಯಂತ ಕ್ಷೀಣವಾಗಿ ಟಾರ್ರ್ಕ್... ಎಂದು ಸದ್ದಾಯಿತು. ನಿದ್ರೆಯಲ್ಲಿದ್ದ ಗುರುಗಳಿಗೆ ಆ ಶಬ್ದ ಸಾಕಿತ್ತು ಎಚ್ಚರಗೊಳ್ಳಲು. ಗುರುಗಳು ಎದ್ದು ನಿಧಾನವಾಗಿ ಮಕ್ಕಳ ಕೋಣೆಯ ಕಡೆಗೆ ಸಾಗಿದರು. ಆಗ ಯಾರೋ ಒಬ್ಬ ವಿದ್ಯಾರ್ಥಿ ತಲೆಯ ಮೇಲೆ ಕಂಬಳಿಯನ್ನು ಹೊದ್ದುಕೊಂಡು ಮನೆಯ ಪಡಸಾಲೆಯನ್ನು ದಾಟುತ್ತಿದ್ದ. ಗುರುಗಳಿಗೆ ಅಚ್ಚರಿಯಾಯಿತು! ಇದೇನಿದು? ಇಂತಹ ಸರಿಹೊತ್ತಿನಲ್ಲಿ ಇಂತಹ ಗೊಂಡಾರಣ್ಯದಲ್ಲಿ ಇವನೆಲ್ಲಿಗೆ ಹೋಗುತ್ತಿದ್ದಾನೆ? ಅದೂ ಒಬ್ಬನೇ? ಎಂದು ಮನದಲ್ಲಿ ಎಣಿಸುತ್ತಾ ತಾವೂ ನಿಧಾನವಾಗಿ ಅವನನ್ನು ಹಿಂಬಾಲಿಸಿದರು.

ಗುರುಗಳ ಮನೆಯಿಂದ ಕೂಗಂಚಿನ ದೂರದಲ್ಲಿ ಒಂದು ಕಡೆ ಜಾಗ ಮಾಡಿಕೊಂಡ ಆ ವಿದ್ಯಾರ್ಥಿ ಸುತ್ತಲೂ ಯಾರೂ ಇಲ್ಲ ಎಂದುಖಾತ್ರಿ ಪಡಿಸಿಕೊಂಡು ತನ್ನ ವಸ್ತ್ರದೊಳಗೆ ಬಚ್ಚಿಟ್ಟಿದ್ದ ತುಂಡು ಬೀಡಿಯೊಂದನ್ನು ಹೊರಗೆ ತೆಗೆದುಕೊಂಡು ಅದಕ್ಕೆ ಬೆಂಕಿ ಅಂಟಿಸಿ ಬಾಯಿಗಿಟ್ಟ. ಕಂಬಳಿಯ ಹೊದಿಕೆಯನ್ನು ಇನ್ನಷ್ಟು ಮೇಲೆಳೆದುಕೊಂಡು ಬುಸು ಬುಸು ಎಂದು ಹೊಗೆಬಿಡುತ್ತಿದ್ದ. ಕಣ್ಣಿಗೆ ಕಪ್ಪು ಮಸಿ ಮೆತ್ತುವಂತಿದ್ದ ಆ ಕಾಡಿರುಳಲ್ಲಿ ಅವನ ಬಾಯಿಯಲ್ಲಿ ಪ್ರಜ್ವಲಮಾನವಾಗಿ ಉರಿಯುತ್ತಿದ್ದ ಕೆಂಡ ಕಂಡೊಡನೆ ಗುರುಗಳ ಮನಸ್ಸಿಗೆ ತುಂಬಾ ಕಹಿಯಾಯಿತು.

ಗುರುಗಳು 'ಮಗೂ' ಎಂದರು. ತಕ್ಷಣ ಬರಸಿಡಿಲೆರಗಿದಂತೆ ತತ್ತರಿಸಿದ ವಿದ್ಯಾರ್ಥಿ ಮೇಲೆದ್ದು ಓಡತೊಡಗಿದನು. ಆಗ ಗುರುಗಳು ''ಹೇಯ್ ನಿಲ್ಲೋ ನಿಲ್ಲಲ್ಲಿ'' ಎಂದು ಕೂಗಿದರು. ಗುರುಗಳ ಆಜ್ಞೆ ಮೀರಲಾರದೇ ಆ ವಿದ್ಯಾರ್ಥಿ ನಿಂತಲ್ಲೇ ಶಿಲೆಯಾಗಿ ನಿಂತ. ಆಗ ಅಲ್ಲಿಗೆ ಬಂದ ಗುರುಗಳು ''ನೋಡು ನೀನು ನನ್ನ ಆಶ್ರಮದಲ್ಲಿ ವಿದ್ಯಾಭ್ಯಾಸಕ್ಕೆಂದು ಬಂದಿರುವ ನನ್ನ ವಿದ್ಯಾರ್ಥಿ. ಈ ಕಾಡಿರುಳಲ್ಲಿ ನೀನು ಇಂತಹ ದುಶ್ಚಟವೊಂದಕ್ಕೆ ಬಲಿಯಾಗಿ ಇಲ್ಲಿಗೆ ಬಂದಿರುವುದು ನನಗೆ ನಿಜಕ್ಕೂ ಖೇದವೆನ್ನಿಸುತ್ತಿದೆ''. ವಿದ್ಯಾರ್ಥಿ ನಿಂತಲ್ಲೇ ನಡುಗುತ್ತಿದ್ದ. ಆಗ ಗುರುಗಳು 'ನೋಡು ಮಗೂ, ಈ ಕತ್ತಲಲ್ಲಿ ನೀನಾರೆಂದು ನನಗೆ ತಿಳಿಯುತ್ತಿಲ್ಲ ಮತ್ತು ನಿನ್ನ ಈ ತಪ್ಪನ್ನು ಇತರ ಯಾವ ವಿದ್ಯಾರ್ಥಿಗೂ ನಾನು ಹೇಳುವುದಿಲ್ಲ. ಆದರೆ ಅದಕ್ಕಾಗಿ ನಿನ್ನ ಈ ದುಶ್ಚಟವನ್ನು ಈಗಿಂದೀಗಲೇ ನಿಲ್ಲಿಸಬೇಕು. ನಿನ್ನ ಬಳಿಯಿರುವ ಬೀಡಿಗಳನ್ನು ನನ್ನ ಕೈಯಲ್ಲಿಡು' ಎಂದರು.

ಆ ವಿದ್ಯಾರ್ಥಿ ಮರುಮಾತಾಡದೇ ತನ್ನ ಬಳಿಯಿದ್ದ ಅಷ್ಟೂ ಬೀಡಿಗಳನ್ನು ಮುಖ ಮುಚ್ಚಿಕೊಂಡು ಗುರುಗಳ ಕೈಯಲ್ಲಿಟ್ಟು ಮನೆಯ ಕಡೆಗೆ ಓಡಿದ. ಹೀಗೆ ಓಡಿಬಂದವನೇ ವಿದ್ಯಾಪತಿಯಾಗಿದ್ದ, ಕೋಣೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ನಿದ್ರೆಯಲ್ಲಿದ್ದರೆ ವಿದ್ಯಾಪತಿಗೆ ಮಾತ್ರ ನಿದ್ದೆ ಬರಲಿಲ್ಲ. ತನ್ನ ಕರ್ಮಕಾಂಡವನ್ನು ಸಹಪಾಠಿಗಳಿಗೆ ಅಥವಾ ತನ್ನ ಪೋಷಕರಿಗೆ ಗುರುಗಳು ಹೇಳಿದರೆ ನನ್ನ ಮರ್ಯಾದೆ ಹೋಗುತ್ತದಲ್ಲ ಎಂದು ಹಲುಬಿದ. ಆಗಲೇ ನಸುಕಾಗುತ್ತಿತ್ತು. ಕೂಡಲೇ ವಿದ್ಯಾಪತಿಗೆ ಏನೋ ಹೊಳೆದಂತಾಗಿ ಇತರೆ ವಿದ್ಯಾರ್ಥಿಗಳನ್ನು ಎಬ್ಬಿಸಿದ. ಎಲ್ಲರನ್ನೂ ತನ್ನ ಸುತ್ತ ದುಂಡಗೆ ಕೂರಿಸಿಕೊಂಡು 'ನಿನ್ನೆ ರಾತ್ರಿ ನಾನೊಂದು ಭಯಂಕರ ದೃಶ್ಯವನ್ನು ನೋಡಿದೆ. ಆ ದೃಶ್ಯ ನೆನೆಸಿಕೊಂಡರೆ ನನ್ನ ಮೇಲೆ ನನಗೆ ಅಸಹ್ಯವೆನಿಸುತ್ತದೆ' ಎಂದ. ಸಹಪಾಠಿಗಳೆಲ್ಲಾ 'ಯಾಕೆ? ಏನಾಯಿತು ಹೇಳು?' ಎಂದರು. ಆಗ ವಿದ್ಯಾಪತಿ 'ನಿನ್ನೆ ರಾತ್ರಿ ನಮ್ಮ ಗುರುಗಳು ಬೀಡಿ ಸೇದುತ್ತಿರುವುದನ್ನು ಕಣ್ಣಾರೆ ಕಂಡೆ! ಛೇ ಧೂಮಪಾನ ಒಂದು ಅನಿಷ್ಟ ಎಂದು ಪಾಠ ಮಾಡುವ ಗುರುಗಳು ಹೀಗೆ ಮಾಡಬಹುದೇ?' ಎಂದನು.

ಆಗ ವಿದ್ಯಾರ್ಥಿಗಳು 'ಏನಂದೇ? ನಮ್ಮ ಗುರುಗಳು ಬೀಡಿ ಸೇದುವುದೇ? ನಿನಗೆಲ್ಲೋ ಹುಚ್ಚು. ಗುರುಗಳ ಬಗ್ಗೆ ಮಾತನಾಡುವಾಗ ನಾಲಿಗೆ ಹಿಡಿತದಲ್ಲಿರಲಿ' ಎಂದರು. ಇದರಿಂದ ವಿಚಲಿತನಾಗದ ವಿದ್ಯಾಪತಿ 'ನಾನೂ ನಿಮ್ಮಂತೇ ಭಾವಿಸಿದ್ದೆ. ಆದರೆ ಸತ್ಯ ಯಾವಾಗಲೂ ಕಹಿ. ನಿಮಗೆ ನನ್ನ ಮಾತಿನಲ್ಲಿ ಅನುಮಾನವಿದ್ದರೆ ಈಗಿಂದೀಗಲೇ ಗುರುಗಳ ಕೋಣೆಗೆ ಹೋಗಿ ಅವರ ಬಲ ಅಂಗೈಯನ್ನು ಮೂಸಿ ನೋಡಿ' ಎಂದು ಸವಾಲೆಸೆದನು.

ವಿದ್ಯಾರ್ಥಿಗಳಲ್ಲಿ ಗೊಂದಲ–ಭಯ ಒಟ್ಟೊಟ್ಟಿಗೆ ಆಗತೊಡಗಿದವು. ಆದರೂ ವಿದ್ಯಾಪತಿಯ ಆರೋಪವನ್ನು ಒಪ್ಪಲಾಗದೇ ನಿಧಾನವಾಗಿ ಗುರುಗಳ ಕೋಣೆಗೆ ಕಳ್ಳಹೆಜ್ಜೆ ಹಾಕಿದರು. ಮಂಚದ ಮೇಲೆ ಮಲಗಿದ್ದ ಗುರುಗಳ ಅಂಗೈ ಆಕಾಶವನ್ನು ನೋಡುತ್ತಿತ್ತು. ಆಗ ಒಬ್ಬೊಬ್ಬರೇ ಬಂದು ಗುರುಗಳ ಅಂಗೈಯನ್ನು ಮೂಸಿ ಮೂಸಿ ನೋಡಿದರು. ಏನಾಶ್ಚರ್ಯ? ಗುರುಗಳ ಅಂಗೈ ಸುವಾಸನೆ ಬೀರುತ್ತಿದೆ! ಇದರಿಂದ ವಿದ್ಯಾರ್ಥಿಗಳಲ್ಲಿ ಗುಸುಗುಸು ಆರಂಭವಾಗಿ ಅದು ಗುರುಗಳನ್ನು ಎಬ್ಬಿಸಿತು.

ಗುರುಗಳು ಎದ್ದು ನೋಡುತ್ತಾರೆ. ಇಡೀ ಶಿಷ್ಯ ಬಳಗವೇ ತಮ್ಮನ್ನು ಸುತ್ತುವರೆದಿದೆ, ಆಗ ಗುರುಗಳು 'ಯಾಕೆ ಏನಾಯಿತು?' ಎಂದರು. ವಿದ್ಯಾರ್ಥಿಗಳು ನಡೆದದ್ದನ್ನೆಲ್ಲ ಹೇಳಿದರು. ಆಗ ಗುರುಗಳು ಏನನ್ನೂ ಹೇಳದೇ ಜೋರಾಗಿ ನಗತೊಡಗಿದರು. ವಿದ್ಯಾರ್ಥಿಗಳು ಮತ್ತಷ್ಟು ಗೊಂದಲಕ್ಕೆ ಒಳಗಾದರು. ಗುರುಗಳು 'ಆ ವಿದ್ಯಾಪತಿಗೆ ಆಗಾಗ ಇಂತಹ ಕನಸುಗಳು ಬೀಳುತ್ತವೆ. ಅದನ್ನೆಲ್ಲಾ ನಂಬಿಕೊಂಡು ಬಂದಿದ್ದೀರಲ್ಲಾ ನಡೀರಿ ನಡೀರಿ' ಎಂದರು. ವಿದ್ಯಾರ್ಥಿಗಳು ಪೆಚ್ಚುಮೋರೆ ಹಾಕಿಕೊಂಡು ಕೋಣೆಯಿಂದ ಹೊರಬಂದರು, ತುಸು ದೂರದಿಂದ ಇದನ್ನೆಲ್ಲ ನೋಡುತ್ತಿದ್ದ ವಿದ್ಯಾಪತಿ ಮಾತ್ರ ಮೌನಕ್ಕೆ ಜಾರಿದ್ದ. ಆತನ ಮನಸ್ಸು ಮಾತ್ರ 'ಇನ್ಮುಂದೆ ಸತ್ರೂ ಇಂಥಾ ಕೆಲಸ ಮಾಡಬಾರದು' ಎಂದು ಎಚ್ಚರಿಸುತ್ತಿತ್ತು. ■